**ಕಾರಟಗಿ ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪನೆ ಬಗ್ಗೆ**

**1025 (1071) ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ (ಕನಕಗಿರಿ) :** ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯ ದಾಳಿಂಬೆ ಬೆಳೆಗಾರರು ಬೆಳೆದ ಬೆಳೆಗೆ ಮಾರಕ ರೋಗವಾದ ದುಂಡಾಣು ಅಂಗಮಾರಿ ರೋಗ ತಗುಲಿದ್ದು, ದಾಳಿಂಬೆ ಬೆಳೆಗಾರರು ಅದರಿಂದ ತೀವ್ರ ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ರೋಗವನ್ನು ತಡೆಗಟ್ಟುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಈ ದಾಳಿಂಬೆ ಬೆಳೆಗಾರರ ಸಾಲ ಮನ್ನಾ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವಾಗ ಸಾಲ ಮನ್ನಾ ಮಾಡಲಾಗುವುದು?

**ಶ್ರೀ ಎಸ್.ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು) :**

ಅ) ಹೌದು.

ಆ) ಈ ರೋಗವನ್ನು ತಡೆಗಟ್ಟುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ;

1. 2007–08 ಮತ್ತು 2008–09 ನೇ ಸಾಲುಗಳಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ (NHM) ಅಡಿಯಲ್ಲಿ ಹಾಗೂ 2009–10ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಲ್ಲಿ ಬ್ಯಾಕ್ಟೀರಿಯ ಪೀಡಿತ ದಾಳಿಂಬೆ ತೋಟಗಳ ಪುನಃಶ್ಚೇತನಕ್ಕಾಗಿ Good Management Practices (GMP) ಕಾರ್ಯಕ್ರಮದಡಿ ಸಹಾಯಧನ ರೂ. 25,000/– ಪ್ರತಿ ಹೆಕ್ಟೇರ್‌ರಂತೆ 4 ಹೆಕ್ಟೇರ್ ವರೆಗೆ ದಾಳಿಂಬೆ ಬೆಳೆಗಾರರಿಗೆ ಈಗಾಗಲೇ ನೀಡಲಾಗಿರುತ್ತದೆ.
2. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ INM/IPM ಕಾರ್ಯಕ್ರಮದಡಿ ತೋಟಗಳಲ್ಲಿ ರೋಗ ನಿರ್ವಹಣೆಗಾಗಿ

ದಾಳಿಂಬೆ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ ರೂ.1000/– ರಂತೆ ಗರಿಷ್ಠ 4 ಹೆಕ್ಟೇರ್‌ಗೆ ನೀಡಲಾಗುವುದು.

3. ವೈಜ್ಞಾನಿಕವಾಗಿ ಹಾಗೂ ಪರಿಣಾಮಕಾರಿಯಾಗಿ ದುಂಡಾಣು ರೋಗವನ್ನು ನಿಯಂತ್ರಿಸುವುದಕ್ಕಾಗಿ ತರಬೇತಿ, ವಿಚಾರ ಸಂಕಿರಣ, ಕಾರ್ಯಗಾರ, ಪ್ರಾತ್ಯಕ್ಷಿಕೆಗಳನ್ನು ಯೋಜಿಸುವುದ ರೊಂದಿಗೆ, ಕರ ಪತ್ರಗಳನ್ನು ವಿತರಿಸಿ, ತಾಂತ್ರಿಕ ಮಾರ್ಗ ದರ್ಶನದ ಮೂಲಕ ದಾಳಿಂಬೆ ಬೆಳೆಗಾರರಿಗೆ ಇಲಾಖೆ ವತಿಯಿಂದ ಅರಿವು ಮೂಡಿಸಲಾಗುತ್ತಿದೆ.

ಇ) ದಿನಾಂಕ:12.12.2011ರಂದು ವಿಧಾನಸಭೆಯ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯ ಮತ್ತು ಶ್ರೀ ಅಮರೇಗೌಡ ಬಯ್ಯಾಪುರ ಶಾಸಕರು, ನಿಯಮ 73 ರಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರಿಸುವಾಗ ಸಹಕಾರ ಸಂಘಗಳಿಂದ ದಾಳಿಂಬೆ ಬೆಳೆಗೆ ನೀಡಲಾದ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದಾಗಿ ಹಾಗೂ ಅಸಲನ್ನು ಕಂತುಗಳಲ್ಲಿ ಮರುಪಾವತಿಸಲು ರೀಷೆಡ್ಯೂಲ್ ಮಾಡಿಕೊಡಲಾಗುವುದೆಂದು ಸಹಕಾರ ಇಲಾಖೆಯ ವತಿಯಿಂದ ತಿಳಿಸಲಾಗಿದೆ.

**ಕಾರಟಗಿ ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪನೆ ಬಗ್ಗೆ**

**1026 (1072) ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ (ಕನಕಗಿರಿ) :** ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಕಗಿರಿ ಮತಕ್ಷೇತ್ರ ಕಾರಟಗಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ರೈಸ್ ಟೆಕ್ನಾಲಜಿ ಪಾರ್ಕ್‌ಗೆ 2010–11 ಹಾಗೂ 2011–12ನೇ ಸಾಲಿನಲ್ಲಿ ಬಿಡುಗಡೆಯಾದ ಹಣ ಎಷ್ಟು?

ಆ) ಬಿಡುಗಡೆಯಾದ ಹಣವನ್ನು ಯಾವ ವಿಭಾಗಕ್ಕೆ ವೆಚ್ಚ ಮಾಡಲಾಗಿದೆ;

ಇ) ರೈಸ್ ಟೆಕ್ನಾಲಜಿ ಪಾರ್ಕ್‌ಗೆ ಮೂಲ ಯೋಜನೆಯಲ್ಲಿ ಎಷ್ಟು ಭೂಮಿ ನಿಗದಿ ಮಾಡಿದೆ; ಈಗ ಎಷ್ಟು ಸ್ವಾಧೀನಪಡಿಸಿಕೊಂಡಿದೆ; ಕೊಟ್ಟ ಪರಿಹಾರ ಎಷ್ಟು?